ನಾಚಿಕೆಯಾಗುತ್ತಿದೆ. ಅದೂ ಎಲ್ಲ ಬಿಟ್ಟು ನನ್ನನ್ನು ನನ್ನ ಪಾಡಿಗೆ ಇರಲು ಅವಕಾಶಮಾಡಿಕೊಟ್ಟ, ನನಗೆಂದೂ ನೋವು ಕೊಡದ ಅಪ್ಪನ ಬಗ್ಗೆ ಹೀಗಂದುಕೊಂಡೆ. ಬರವಣಿಗೆ ಮತ್ತು ಸಾಹಿತ್ಯಗಳು ನಮ್ಮ ಬದುಕಿನಲ್ಲಿ ಕೇಂದ್ರವಿಲ್ಲ ಎಂಬ ಸಂಗತಿಗೆ, ನಮ್ಮ ಸಂತೋಷ ಮತ್ತು ತಪ್ಪಿತಸ್ಥ ಭಾವನೆಗಳಿಗೆ ನಿಕಟವಾಗಿ ಸಂಬಂಧಿಸಿದ್ದು ಅನ್ನುವುನ್ನು ಈ ಸಂಗತಿ ಮನಸ್ಸಿಗೆ ತರಬೇಕು.

ಆದರೆ ನನ್ನ ಕಥೆಗೊಂದು ವಿನ್ಯಾಸವಿದೆ. ಆ ಹೊತ್ತು ಇನ್ನೇನೋ ನನಗೆ ತಕ್ಷಣ ನೆನಪಿಗೆ ಬಂದು, ನನ್ನ ತಪ್ಪಿತಸ್ಥ ಭಾವನೆ ಇನ್ನೂ ದಟ್ಟವಾಯಿತು. ನಮ್ಮಪ್ಪ ಸೂಟ್‌ಕೇಸನ್ನು ನನ್ನ ಹತ್ತಿರ ಬಿಟ್ಟು ಹೋಗುವುದಕ್ಕೆ ಇಪ್ಪತ್ತಮೂರು ವರ್ಷ ಮೊದಲು, ನಾನು ಕಾದಂಬರಿಕಾರನಾಗಬೇಕೆಂದು ನಿರ್ಣಯಿಸಿ ಮಿಕ್ಕೆಲ್ಲವನ್ನೂ ತೊರೆದು ರೂಮಿನಲ್ಲಿ ಒಬ್ಬನೇ ಸೇರಿಕೊಂಡು ನಾಲ್ಕು ವರ್ಷ ಕಳೆದ ಮೇಲೆ, ನನಗೆ ಇಪ್ಪತ್ತೆರಡು ವಯಸ್ಸು ಆಗಿದ್ದಾಗ ನನ್ನ ಮೊದಲನೆಯ ಕಾದಂಬರಿ 'ಸೆವ್ದೆತ್ ಬೈ ಅಂಡ್ ಸನ್ಸ್' ಬರೆದು ಮುಗಿಸಿದ್ದೆ. ಟೈಪು ಮಾಡಿದ್ದ, ನನ್ನ ಅಪ್ರಕಟಿತ ಕಾದಂಬರಿಯ ಹಸ್ತಪ್ರತಿಯನ್ನು ಅಪ್ಪನ ಕೈಗೆ ಇಡುವಾಗ ನನ್ನ ಕೈ ನಡುಗುತ್ತಿದ್ದವು. ಅಪ್ಪ ಅದನ್ನು ಓದಲಿ, ಏನನ್ನಿಸಿತು ಹೇಳಲಿ ಎಂದು ಬಯಸಿದ್ದೆ. ಅಪ್ಪನ ಅಭಿರುಚಿಯಲ್ಲಿ, ವಿವೇಕದಲ್ಲಿ ನನಗೆ ವಿಶ್ವಾಸವಿತ್ತು ಅನ್ನುವುದಷ್ಟೇ ಕಾರಣವಲ್ಲ. ಅಪ್ಪನ ಅಭಿಪ್ರಾಯ ನನಗೆ ಮುಖ್ಯವಾಗಿತ್ತು. ಯಾಕೆಂದರೆ ನಮ್ಮ ಅಮ್ಮನಂತಲ್ಲದೆ ಅಪ್ಪ ಎಂದೂ ನಾನು ಬರಹಗಾರನಾಗುವುದನ್ನು ವಿರೋಧಿಸಲಿಲ್ಲ. ಆಗ ನಮ್ಮಪ್ಪ ನಮ್ಮ ಜೊತೆಯಲ್ಲಿರಲಿಲ್ಲ. ದೂರದಲ್ಲಿದ್ದರು. ಅಪ್ಪ ವಾಪಸ್ಸು ಬರಲಿ ಎಂದು ಚಡಪಡಿಸಿಕೊಂಡು ಕಾಯುತ್ತಿದ್ದೆ. ಹಲವು ವಾರಗಳ ನಂತರ ಅಪ್ಪ ಬಂದಾಗ ಬಾಗಿಲಿಗೆ ಓಡಿ ಹೋದೆ. ನಮ್ಮಪ್ಪ ಏನೂ ಹೇಳಲಿಲ್ಲ. ತಟ್ಟನೆ ನನ್ನನ್ನು ತೋಳಿನಲ್ಲಿ ಬಳಸಿದರು. ಆ ಅಪ್ಪುಗೆಯೇ ಅಪ್ಪನಿಗೆ ಕಾದಂಬರಿ ತುಂಬ ಇಷ್ಟವಾಗಿತ್ತು ಅನ್ನುವುದನ್ನು ಸೂಚಿಸಿತ್ತು. ಭಾವತುಂಬಿದ ಗಳಿಗೆಗಳ ನಂತರ ಯಾವಾಗಲೂ ಆವರಿಸುವ ತೀರ ವಿಚಿತ್ರವಾದ ಮೌನದಲ್ಲಿ ನಾವು ಅದ್ದಿಹೋದೆವು. ನಮಗೆ ಸ್ವಲ್ಪ ಸಮಾಧಾನವಾದ ಮೇಲೆ ಮಾತಾಡಿದೆವು. ನಮ್ಮಪ್ಪ ತೀರ ಉದ್ವೇಗದಲ್ಲಿ ಉತ್ಪ್ರೇಕ್ಷೆಯ ಭಾಷೆ ಬಳಸಿಕೊಂಡು ನನ್ನ ಕಾದಂಬರಿಯ ಬಗ್ಗೆ ತಮ್ಮ ವಿಶ್ವಾಸ ವ್ಯಕ್ತಪಡಿಸಿದರು. ಇವತ್ತು ನನಗೆ ದೊರೆತಿರುವಂಥ ಬಹುಮಾನ ಒಂದಲ್ಲ ಒಂದು ದಿನ ಖಂಡಿತ ಬರುತ್ತದೆ, ಆ ಸಂತೋಷ ಅನುಭವಿಸುವುದಕ್ಕೆ ನಾನೂ ಇರಬೇಕು ಎಂದು ಹೇಳಿದ್ದರು. ತಮ್ಮ ಒಳ್ಳೆಯ ಅಭಿಪ್ರಾಯವನ್ನು ಒಪ್ಪಿಸುವುದಕ್ಕೆ ಅಪ್ಪ ಪ್ರಯತ್ನಪಡುತ್ತಿದ್ದರು. ಅಥವಾ ಈ ಬಹುಮಾನವನ್ನು ನನ್ನ ಬದುಕಿನ ಗುರಿಯಾಗಿಸಲು ಯತ್ನಿಸುತ್ತಿದ್ದರು. ಅಥವಾ ಒಂದಲ್ಲ ಒಂದು ದಿನ ನೀನೊಬ್ಬ ಪಾಶಾ ಆಗುತ್ತೀಯ ಎಂದು ತಮ್ಮ ಗಂಡು ಮಗನಿಗೆ ಹುಮ್ಮಸ್ಸು ತುಂಬುವ ಟರ್ಕಿ ತಂದೆಯರ ಹಾಗೆ ನನ್ನ ಪ್ರೋತ್ಸಾಹಿಸುತ್ತಿದ್ದರು. ಮುಂದೆ ಎಷ್ಟೋ ವರ್ಷ ಅದೇ ಮಾತು ಹೇಳುತ್ತ ನನ್ನನ್ನು ಹುರಿದುಂಬಿಸುತ್ತಿದ್ದರು.

ನಮ್ಮಪ್ಪ ಡಿಸೆಂಬರ್ 2002ರಲ್ಲಿ ತೀರಿ ಹೋದರು.

ಇವತ್ತು, ಸ್ವೀಡಿಶ್ ಅಕಾಡೆಮಿಯಲ್ಲಿ, ಗೌರವಾನ್ವಿತ ಸದಸ್ಯರು ನನಗೆ ಕೊಡಮಾಡಿರುವ ಮಹಾನ್ ಬಹುಮಾನವನ್ನು, ಮಹಾ ಗೌರವವನ್ನು ಸ್ವೀಕರಿಸುವಾಗ, ಗಣ್ಯ ಅತಿಥಿಗಳೆಲ್ಲ ಈ ಸಮಾರಂಭದಲ್ಲಿ ನೆರೆದಿರುವಾಗ, ನಮ್ಮಪ್ಪನೂ ಇಲ್ಲಿ ನಮ್ಮೊಡನೆ ಇದ್ದಿದ್ದರೆ ಎಂದು ತೀವ್ರವಾಗಿ ಅನ್ನಿಸುತ್ತಿದೆ.

⌘